■ ಹನಿ

## ಪಿಂಕಿ ಪ್ರಾಮಾಣಿಕಳೆ?

ಪಿಂಕಿ ಪ್ರಾಮಾಣಿಕ್ ಎಂಬ ಭಾರತದ ಖ್ಯಾತ ಮಹಿಳಾ ಅಥ್ಲೀಟ್‌ಳ ಅಗ್ನಿ-ಪರೀಕ್ಷೆ ಮುಂದುವರಿದಿದೆ. 'ಈಕೆ ಗಂಡು, ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾಳೆ' ಎಂದು ಈಕೆಯ 'ಲಿವ್ ಇನ್' ಜತೆಗಾರ್ತಿ ಅನಾಮಿಕಾ ಆಚಾರ್ಯ ಆರೋಪಿಸಿದಾಗ, ಕ್ರೀಡಾಲೋಕದಲ್ಲಿ ದಿಗ್ಭ್ರಮೆ ಮೂಡಿತ್ತು. ಏಕೆಂದರೆ ಪಿಂಕಿ ಸಾಮಾನ್ಯ ಕ್ರೀಡಾಪಟುವಲ್ಲ; ಭಾರತದ ಕೀರ್ತಿ ಪತಾಕೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾರಿಸಿದ ಅತ್ಯುತ್ತಮ ಸ್ಪ್ರಿಂಟರ್. ಅಂತರ-ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮಹಿಳೆಯರ ವಿಭಾಗದಲ್ಲಿ ಭಾಗವಹಿಸಿ, ಚಿನ್ನದ ಪದಕಗಳನ್ನು ಗೆದ್ದಿರುವ ಓಟಗಾರ್ತಿಯೊಬ್ಬಳನ್ನು ಐದು ವರ್ಷಗಳ ಬಳಿಕ ಗಂಡು ಎಂದು ಹೇಳಿದರೆ ದಿಗ್ಭ್ರಮೆಯಾಗದೆ ಇದ್ದೀತೆ?

ಅತ್ಯಾಚಾರದ ದೂರು ಬಂದಾಕ್ಷಣ ಪೊಲೀಸರು ಪಿಂಕಿಯನ್ನು ಕರೆದೊಯ್ದು ಪ್ರಕರಣ ದಾಖಲಿಸಿದ್ದಾರೆ. ಖಾಸಗಿ ಆಸ್ಪತ್ರೆಯೊಂದರಲ್ಲಿ ಆಕೆಯ ಪುರುಷತ್ವದ ಪರೀಕ್ಷೆ ನಡೆಸಿದ್ದಾರೆ. ಪಿಂಕಿಯ 19 ಸೆಕೆಂಡುಗಳ ನಗ್ನಚಿತ್ರ-ವೊಂದು ಮೊಬೈಲ್ ಎಂಎಂಎಸ್‌ಗಳಲ್ಲಿ ಹರಿದಾಡಿದೆ. ಈ ಚಿತ್ರ ಖಾಸಗಿ ಆಸ್ಪತ್ರೆಯಲ್ಲಿ ಪರೀಕ್ಷೆ ನಡೆಸುವಾಗ-ನದ್ದು! 14 ದಿನಗಳ ಪೊಲೀಸ್ ಕಸ್ಟಡಿಯ ಬಳಿಕ ನ್ಯಾಯಾಲಯದಲ್ಲಿ ಜಾಮೀನು ಸಿಕ್ಕು ಪಿಂಕಿ ಹೊರಗೆ ಬಂದಾಗ, ಕಸ್ಟಡಿಯಲ್ಲಿ ತನ್ನನ್ನು



ಕೆಟ್ಟದ್ದಾಗಿ ನಡೆಸಿಕೊಂಡ ಬಗ್ಗೆ ಬಾಯಿ ಬಿಟ್ಟಿದ್ದಾಳೆ. ತಕ್ಷಣಕ್ಕೆ ಕೋಲ್ಕತ್ತಾದ ಪ್ರಮುಖ ಕ್ರೀಡಾಪಟುಗಳೆಲ್ಲ ಪಿಂಕಿಯ ಬೆಂಬಲಕ್ಕೆ ನಿಂತು ಪ್ರತಿಭಟನೆ ನಡೆಸಿದ್ದಾರೆ. ಪ್ರತಿಭಟನೆಯ ಮುಂಚೂಣಿಯಲ್ಲಿ ಮಾಜಿ ಅಥ್ಲೀಟ್ ಅವತಾರ್ ಸಿಂಗ್ ಮತ್ತು ಆತನ ಪತ್ನಿ, ಇನ್ನೊಬ್ಬ ಖ್ಯಾತ ಓಟಗಾರ್ತಿ ಜ್ಯೋತಿರ್ಮಯಿ ಸಿಕ್ದರ್ ಇದ್ದರು ಎನ್ನುವುದು ವಿಶೇಷ.

ಆದರೆ ಪಿಂಕಿ ಹೆಣ್ಣೇ ಅಥವಾ ಗಂಡೇ.. ಎನ್ನುವ ವಿಷಯ ಮಾತ್ರ ಸ್ಪಷ್ಟವಾಗಿ ಇತ್ಯರ್ಥವಾಗಿಲ್ಲ. ಆರಂಭಿಕ ಪರೀಕ್ಷೆಯ ಫಲಿತಾಂಶದ ಪ್ರಕಾರ 'ಈಕೆ ಹೆಣ್ಣಲ್ಲ' ಎಂದು ವರದಿ ಬಂದಿದೆಯಂತೆ! ಆದರೆ ಗಂಡು ಹೌದೆ.. ಅಂದರೆ ಅದು ಖಚಿತ-ವಾಗಿಲ್ಲ! ಈಗ ಕೋರ್ಟ್, ಕ್ರೊಮೋಸೋಮ್ ಮಾದರಿಯ ಪರೀಕ್ಷೆಗೆ ಆದೇಶ ನೀಡಿದೆ. ಇಷ್ಟಾಗುವಾಗ ಘಟನೆ ಇನ್ನಷ್ಟು ನಾಟಕೀಯ ತಿರುವು ಪಡೆದಿದೆ. 'ಮಾಜಿ ಅಥ್ಲೀಟ್ ಅವತಾರ್ ಸಿಂಗ್‌ನೇ ತನ್ನನ್ನು ಬಲವಂತ ಮಾಡಿ ಪಿಂಕಿ ವಿರುದ್ಧ ಅತ್ಯಾಚಾರದ ದೂರು ನೀಡಿಸಿದ್ದಾರೆ. ಹಣಕ್ಕೆ ಸಂಬಂಧಿಸಿದ ಪಿಂಕಿ ಜತೆಗೆ ನಡೆದ ಜಗಳ ಇದಕ್ಕೆ ಕಾರಣ' ಎಂದು ಅನಾಮಿಕಾ ಪೊಲೀಸರಿಗೆ ತಿಳಿಸಿದ್ದಾಳೆ. ಇದಕ್ಕೆ ಪೂರಕವಾಗಿ ತನ್ನ ಮತ್ತು ಅವತಾರ್ ಸಿಂಗ್ ಮಧ್ಯೆ ನಡೆದ ಸಂಭಾಷಣೆಯ ಆಡಿಯೊ ದಾಖಲೆಯನ್ನೂ ನೀಡಿದ್ದಾಳೆ. ಇಡೀ ಪ್ರಕರಣ ಥ್ರಿಲ್ಲರ್ ಸಿನಿಮಾದಂತೆ ಎತ್ತೆತ್ತಲೋ ಓಡುತ್ತಿದೆ!

17ರ ಹರೆಯದಲ್ಲೇ ಏಶ್ಯನ್ ಇಂಡೋರ್ ಕ್ರೀಡಾಕೂಟದಲ್ಲಿ 400 ಮೀಟರ್ ಓಟದಲ್ಲಿ ಕಂಚು ಗೆದ್ದ ಪಿಂಕಿ (ಬರ್ತ್‌ಡೇ 10-4-1986) ಮೂರು ಸಲ ರಾಷ್ಟ್ರೀಯ ಚಾಂಪಿಯನ್ ಆದವಳು. 2005ರ ಏಶ್ಯನ್ ಇಂಡೋರ್ ಕ್ರೀಡಾಕೂಟದಲ್ಲಿ ಮತ್ತು 2006ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದ ಈಕೆ, 2006ರ ದಕ್ಷಿಣ ಏಶ್ಯಾ ಕ್ರೀಡಾಕೂಟದಲ್ಲಿ 400 ಮೀ., 800 ಮೀ. ಹಾಗೂ ರಿಲೇ ಓಟಗಳಲ್ಲಿ ಮೂರು ಸ್ವರ್ಣಗಳನ್ನು ಗೆದ್ದು ಭಾರತಕ್ಕೆ ಹೆಮ್ಮೆ ಮೂಡಿಸಿದವಳು. ಪಿಂಕಿ ನಿಜಕ್ಕೂ ಪ್ರಾಮಾಣಿಕಳೆ?



## ಅಪ್ಪ-ಮಗಳ ಜಟಾಪಟಿ

'ನನ್ನ ಮಗಳು ಗರ್ಭಿಣಿಯಾಗಿದ್ದಾಳೆ ಎಂಬ ಸುದ್ದಿ ತಿಳಿದು ತುಂಬಾ ಸಂತೋಷವಾಗಿದೆ. ಆದರೆ ಆಕೆಯನ್ನು ಅಪ್ಪಿಕೊಳ್ಳುವ, ಮೊಮ್ಮಗುವನ್ನು ಮುದ್ದಾಡುವ ಭಾಗ್ಯ ನನಗಿಲ್ಲ. ಮಗಳೇ ನನ್ನನ್ನು ಕ್ಷಮಿಸು. ಎಲ್ಲವನ್ನೂ ಮರೆತು ನನ್ನನ್ನು ಸ್ವೀಕರಿಸು' ಎಂದು ತಂದೆ ಮಾರ್ಕ್ ಎವಾನ್ಸ್ ಸಾರ್ವಜನಿಕವಾಗಿ ಮನವಿ ಮಾಡಿದ್ದಾನೆ. ಸುದ್ದಿ ಓದಿದ ಮಗಳು ಸಿಟ್ಟಿನಿಂದ, 'ನನ್ನೆದುರಿಗೆ ಬಂದರೆ ಮುಖಕ್ಕೆ ಉಗಿಯುತ್ತೇನೆ. ಕ್ಷಮೆ ಸಾಧ್ಯವಿಲ್ಲ' ಎಂದು ಗುಡುಗಿದ್ದಾಳೆ!

ಈಕೆ ಅಡೆಲ್! ಜಾಗತಿಕ ಸಂಗೀತ ಲೋಕದ ಸೂಪರ್‌ಸ್ಟಾರ್! ಲಂಡನ್ ಸಂಜಾತೆ ಅಡೆಲ್ ಇವತ್ತು ಅಮೆರಿಕ ಮತ್ತು ಬ್ರಿಟನ್ನಿನ ಅತ್ಯಂತ ಜನಪ್ರಿಯ ಯುವ ಗಾಯಕಿ. ಈಕೆ 3 ವರ್ಷದ ಎಳೆಯ ಮಗುವಾಗಿದ್ದಾಗ ತಂದೆ ಎವಾನ್ಸ್, ಪತ್ನಿ ಪೆನ್ನಿ ಮತ್ತು ಮಗಳು ಅಡೆಲ್‌ಳನ್ನು ತ್ಯಜಿಸಿ ಹೊರಟು ಹೋದ. ಆಮೇಲೆ ಎಂದೂ ಮನೆಗೆ ಬರಲಿಲ್ಲ. ತಾಯಿಯ ಮಡಿಲಲ್ಲಿ ಗಾಯಕಿಯಾಗಿ ಬೆಳೆದ ಎವಾನ್ಸ್, ಆಕಸ್ಮಿಕವಾಗಿ ಸಂಗೀತ ಕಂಪೆನಿಯೊಂದರ ಗಮನಕ್ಕೆ ಬಂದಳು. 18ರ ಹರೆಯದಲ್ಲಿದ್ದ ಅಡೆಲ್‌ಳ ಹಾಡಿನ ಡೆಮೋ ಒಂದನ್ನು ಗೆಳತಿಯೊಬ್ಬಳು 'ಮೈ ಸ್ಪೇಸ್'ನಲ್ಲಿ ಅಪ್‌ಲೋಡ್ ಮಾಡಿದ್ದೇ ವರವಾಗಿ ಪರಿಣಮಿಸಿತು. ಸಂಗೀತ ಕಂಪೆನಿಯೊಂದು ಆಕೆಯನ್ನು ಹುಡುಕಿಕೊಂಡು ಬಂದು, ಅವಕಾಶ ನೀಡಿತು.

ಗ್ರಾಮ್ಮಿ, ಅಕಾಡೆಮಿ ಪ್ರಶಸ್ತಿಗಳನ್ನೆಲ್ಲ ಬಾಚಿಕೊಂಡಿರುವ ಅಡೆಲ್ ಈಗ ಎಷ್ಟು ಎತ್ತರಕ್ಕೆ ಬೆಳೆದಿದ್ದಾಳೆಂದರೆ, ಬ್ರಿಟನ್ನಿನ ನಂಬರ್ ಒನ್ ಶ್ರೀಮಂತ ಗಾಯಕಿ ಈಕೆ! ಈಕೆಯ 'ಆಲ್ಬಂ 21' ಜಗತ್ತಿನಾದ್ಯಂತ ಲಕ್ಷಗಟ್ಟಳೆ ಪ್ರತಿಗಳು ಮಾರಾಟವಾಗಿವೆ. ಕಳೆದ ಒಂದೇ ವರ್ಷದಲ್ಲಿ 14 ದಶಲಕ್ಷ ಪೌಂಡ್ ಹಣ ಗಳಿಸಿರುವ ಈಕೆಯ ಒಟ್ಟು ಆಸ್ತಿಯ ಮೊತ್ತ 20 ದಶಲಕ್ಷ ಪೌಂಡ್. 5 ತಿಂಗಳ ಹಿಂದೆ ವೆಸ್ಟ್ ಸಸೆಕ್ಸ್‌ನಲ್ಲಿ 25 ಎಕರೆ ಜಮೀನು ಮತ್ತು ಅದರಲ್ಲಿ 10 ಬೆಡ್ ರೂಮ್‌ಗಳ ದೊಡ್ಡ ಬಂಗಲೆಯೊಂದನ್ನು 7 ದಶಲಕ್ಷ ಪೌಂಡ್ ನೀಡಿ ಖರೀದಿಸಿರುವ ಅಡೆಲ್, ಅಲ್ಲಿ ತನ್ನ ಬಾಯ್‌ಫ್ರೆಂಡ್ ಸೈಮನ್ ಕೊನೆಕಿ ಜತೆ ಸುಖವಾಗಿದ್ದಾಳೆ. ಈ ಮಧ್ಯೆ 'ಮಗಳು ಗರ್ಭಿಣಿ' ಎಂದು ಅಮ್ಮ ಪೆನ್ನಿ ಫೋನ್ ಮಾಡಿ, ಮಾಜಿ ಗಂಡನಿಗೆ ತಿಳಿಸಿದ್ದಾಳೆ. ಅಷ್ಟಕ್ಕೇ ಅಪ್ಪ ಅಳುತ್ತಿದ್ದಾನೆ. ಮಗಳು ಕ್ಷಮಿಸಬಹುದೆ... ಗೊತ್ತಿಲ್ಲ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65